76 ಹುದ್ದೆಗಳು ಖಾಲಿ ಇದೆ, ಇಲಾಖಾ ವತಿಯಲ್ಲಿ ಇದಕ್ಕೆ ನಿಯೋಜನೆಯ ಮೇರೆಗೆ ಯಾವುದಾದರೂ ಒಂದು ರೀತಿಯಲ್ಲಿ ಟೆಂಪರರಿಯಾಗಿ ಅಥವಾ ಖಾಯಂ ಆಗಿ ನೇಮಿಸಿಕೊಳ್ಳುವ ಬಗ್ಗೆ ಅವಕಾಶವನ್ನು ಕಲ್ಪಿಸಿಕೊಡಿ ಎಂದರೆ ಅದು ಆಗುವುದಿಲ್ಲ ಎಂದಿದ್ದಾರೆ. 'ಡಿ' ದರ್ಜೆ ನೌಕರರನ್ನು ಯಾವಾಗ ನೇಮಕಾತಿ ಮಾಡುತ್ತೀರಿ? ಇಲ್ಲದೆ ಇದ್ದರೆ ಅದಕ್ಕೆ ಬದಲಿ ವ್ಯವಸ್ಥೆ ಏನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ. ಎಸ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಹಿಂದೆ ಇದರ ಬಗ್ಗೆ 3–4 ಬಾರಿ ಕೇಳಿ ಹಣಕಾಸಿನ ಪರಿಸ್ಥಿತಿ ಲಭ್ಯವಿಲ್ಲದೆ ಇರುವುದರಿಂದಾಗಿ ಪ್ರಸ್ತಾವನೆಯೂ ರಿಜೆಕ್ಟ್ ಆಗಿ ಸರ್ಕಾರದಿಂದ ಹೋಗಿದೆ. ಇ ಬಾರಿ ಮತ್ತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಜಿಲ್ಲಾ ಪಂಚಾಯಿತಿಯಿಂದ ಆ ಪ್ರಸ್ತಾವನೆಯೂ ಬಂದಿದೆ, ಮುಂದಿನ ವರ್ಷದ ಆಯವ್ಯಯದ ಪರಿಸ್ಥಿತಿಯನ್ನು ಗಮನಿಸಿ ಪ್ರೈಯಾರಿಟಿಯ ಮೇಲೆ ಪ್ರಥಮ ಆದ್ಯತೆಯನ್ನು ಶಾಸಕರ ಕ್ಷೇತ್ರಕ್ಕೆ ಕೊಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರು ಇದರ ಬಗ್ಗೆ ಖಚಿತವಾಗಿ ಹೇಳಬೇಕು.

ಶ್ರೀ ಎನ್.ಚಲುವರಾಯಸ್ವಾಮಿ : ಗ್ರೂಪ್ 'ಡಿ'ನೌಕರರ ಕೊರತೆ ಇದ್ದರೆ ತಕ್ಷಣ ನಮ್ಮ ಕಾರ್ಯದರ್ಶಿಯವರಿಗೆ ತಾವು ಹೇಳಿರುವಂತಹ ಪ್ರಶ್ನೆಗೆ ನಾಳೆಯೇ ಜಟ್ ಸೊರ್ಸ್‌ನಲ್ಲಾದರೂ ತೆಗೆದುಕೊಂಡು ನಿಮ್ಮ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಆದಷ್ಟು ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಮಲೇರಿಯಾ ರೋಗ ತಡೆಗಟ್ಟುವಲ್ಲಿ ಸರ್ಕಾರದ ವೈಫಲ್ಯ

103(1007) ಶ್ರೀ.ಎಸ್.ಎ.ರವೀಂದ್ರನಾಥ್ (ಮಾಯಕೊಂಡ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಲೇರಿಯಾ ರೋಗ ಇತ್ತೀಚೆಗೆ ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ರೋಗ ಜಾಸ್ತಿ ವ್ಯಾಪಿಸಲು ಕಾರಣಗಳೇನು;

ಇ. ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಸರ್ಕಾರ ವಿಫಲಗೊಂಡಿದೆಯೇ;

ಈ. ಪ್ರಸ್ತುತ ಸಾಲಿನಲ್ಲಿ ಮಲೇರಿಯಾ ರೋಗದಿಂದ ಸಾವಿಗಿಡಾದ ರೋಗಿಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ವಿವರ ನೀಡುವುದು);

ಉ. ರೋಗ ಹೆಚ್ಚಾಗಿ ಕಾಣಿಸಿಕೊಂಡಿರುವ ಜಿಲ್ಲಾ ಪ್ರದೇಶಗಳಾವುವು;

ಊ. ರೋಗ ಪತ್ತೆಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ.

ಋ. ರೋಗ ನಿಯಂತ್ರಣಕ್ಕೆ ಅಗತ್ಯವಾದ ಔಷಧೋಪಚಾರಗಳು ಲಭ್ಯವಾಗದಿರುವುದು ನಿಜವೇ;

ಋೂ. ಹಾಗಿದ್ದಲ್ಲಿ, ಔಷಧಗಳ ಸರಬರಾಜಿಗೆ ಸರ್ಕಾರ ಕೈಗೊಂಡ ಕ್ರಮಗಳಾವುವು ?

ಶ್ರೀ ಎನ್.ಚಲುವರಾಯಸ್ವಾಮಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಬಂದಿದೆ.

ಆ. ಈ ರೋಗವು ಸ್ಥಳೀಯವಾಗಿ ಅಲ್ಲಲ್ಲಿ ಹೆಚ್ಚಾಗಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದುವು ಈ ಕೆಳಕಂಡಂತೆ ಇವೆ.

1) ರೋಗವಾಹಕ ಅನಾಫಿಲಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳ ಹೆಚ್ಚಳ ಮತ್ತು ಇದಕ್ಕಾಗಿ ಸೂಕ್ತ ಪರಿಸರ ನಿರ್ಮಾಣ.

2) ರೋಗಪೀಡಿತ ಪ್ರದೇಶಗಳಿಂದ ಜನರ ವಲಸೆ

3) ನೀರಾವರಿ, ಕೃಷಿ, ಕಟ್ಟಡ ನಿರ್ಮಾಣ, ಗಣಿಗಾರಿಕೆ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯಿಂದ ಮಲೇರಿಯ ಹರಡಲು ಸೂಕ್ತವಾದ ಪರಿಸರ ನಿರ್ಮಾಣ.

ಇ. ಇಲ್ಲ.

ಈ. ಈ ಸಾಲಿನಲ್ಲಿ ಮಲೇರಿಯ ರೋಗದಿಂದ 24 ಜನರು ಸಾವಿಗೀಡಾಗಿರುವುದು ವರದಿಯಾಗಿರುತ್ತದೆ. ದಾವಣಗೆರೆ, ಗದಗ, ಬೆಳಗಾಂ, ಮಂಡ್ಯ, ಕೊಪ್ಪಳ, ಹಾವೇರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎರಡೆರಡು ಪ್ರಕರಣಗಳು, ಬೆಂಗಳೂರು(ನ)ದಲ್ಲಿ ಮೂರು ಮತ್ತು ಕೋಲಾರ ಹಾಗೂ ರಾಯಚೂರಿನಲ್ಲಿ ತಲಾ 4 ಪ್ರಕರಣಗಳು ವರದಿಯಾಗಿವೆ.

ಉ. ಈ ವರ್ಷರಾಜ್ಯದಲ್ಲಿ ರಾಯಚೂರು, ದಕ್ಷಿಣ ಕನ್ನಡ, ಕೋಲಾರ, ಬಾಗಲಕೋಟೆ, ಜಿಲ್ಲೆಗಳಲ್ಲಿ ಮಲೇರಿಯ ರೋಗವು ಹೆಚ್ಚಾಗಿ ಕಂಡುಬಂದಿರುತ್ತದೆ.

ಊ. 1) ಮಲೇರಿಯಾ ಪತ್ತೆಗಾಗಿ ವಿಶೇಷವಾದ ಶೀಘ್ರಪತ್ತೆ ತ್ವರಿತ ಚಿಕಿತ್ಸೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2) ಆರೋಗ್ಯ ಕಾರ್ಯಕರ್ತರಿಂದ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿ ಹದಿನೈದು ದಿನಕ್ಕೊಮ್ಮೆ ಮನೆ ಮನೆಗೆ ಭೇಟಿ ನೀಡಿ, ಎಲ್ಲಾ ಜ್ವರ ಪೀಡಿತರಿಂದ ರಕ್ತಲೇಪನಗಳನ್ನು ಸಂಗ್ರಹಿಸಿ, ಪೂರ್ವಭಾವಿ ಚಿಕಿತ್ಸೆ ನೀಡಲಾಗುತ್ತಿದೆ.

3) ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರಕ್ತಲೇಪನ ಪರೀಕ್ಷೆಗೆ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ.

4) ಮಲೇರಿಯಾ ಖಚಿತಪಟ್ಟಲ್ಲಿ, ಕ್ಲೂರೋಕ್ವೀನ್ ಮತ್ತು ಪ್ರೈಮಾಕ್ವಿನ್ ಗುಳಿಗೆಗಳನ್ನು ಮಲೇರಿಯಾ ಪ್ರಭೇದಕ್ಕೆ ತಕ್ಕಂತೆ ತೀವ್ರ ಚಿಕಿತ್ಸೆ ನೀಡಲಾಗುತ್ತದೆ.

5) ಅತಿ ಸಮಸ್ಯಾತ್ಮಕವೆಂದು ಪರಿಗಣಿಸಲಾದ 112 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರದೇಶಗಳಲ್ಲಿ ಪರಿಷ್ಕೃತ ಔಷಧಿ ವಿಧಾನದಂತೆ ರಕ್ತಲೇಪನ ಸಂಗ್ರಹಣೆ ಕಾಲದಲ್ಲಿಯೇ ಪೂರ್ಣ ತೀವ್ರ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಸಾವು-ನೋವು ಸಂಭವಿಸದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ.

ಋ. ಇಲ್ಲ.

ಋೂ. ಎಲ್ಲಾ ಜಿಲ್ಲೆಗಳಿಗೂ ಸಕಾಲಕ್ಕೆ ಮಲೇರಿಯಾ ನಿರೋಧಕ ಔಷಧಿಗಳು ಸರಬರಾಜಾಗುತ್ತಿದೆ.

ಶ್ರೀ ಎಸ್.ಎ.ರವೀಂದ್ರನಾಥ: ಸನ್ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲೆಗಳಿಗೂ ಸಕಾಲದಲ್ಲಿ ಮಲೇರಿಯಾ ನಿರೋಧಕ ಔಷಧಿ ಸರನರಾಜಾಗುತ್ತದೆಂದು ತಿಳಿಸಿದ್ದಾರೆ. ತೋರಣಗಲ್‌ನಲ್ಲಿ ಸುತ್ತಮುತ್ತ ಮನೆಮನೆಗಳಲ್ಲಿ ಹಾಗೂ ಎಲ್ಲಾ ಹಳ್ಳಿಗಳಿಗೂ ಸಾಕಷ್ಟು ಮಲೇರಿಯಾ ಇದ್ದು ಅದನ್ನು ನಿಯಂತ್ರಣ ಮಾಡುವುದಕ್ಕಾಗಲಿಲ್ಲ. ಉದಾಹರಣೆಗೆ ಆರೋಗ್ಯ ಇಲಾಖೆ ಗ್ರಾಮಾಪಂಚಾಯಿತಿಯ ಸ್ವಚ್ಚತಾ ಕಾರ್ಯಗಳು ನಿರ್ಲಕ್ಷ್ಯದಿಂದಾಗಿ ತೋರಣಗಲ್ ಮತ್ತು ಸುತ್ತಮುತ್ತಲೂ ಅನೇಕ ಗ್ರಾಮಗಳಲ್ಲಿ ಕಳೆದ ವರ್ಷದಿಂದ ಮಲೇರಿಯಾ ಸೊಂಕಿನ ರೋಗದಿಂದ ತುತ್ತಾಗಿದ್ದಾರೆ. ಇದಾದ ಮೇಲೂ ಕೂಡ ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇದೇ ತರಹ ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಸಾಕಷ್ಟು ಮಲೇರಿಯಾ ಇದೆ. ಅಲ್ಲಿಯೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಿಮ್ಮ ಮುಖಾಂತರ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಮಂತ್ರಿಗಳು ಮಲೇರಿಯಾ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಇಲ್ಲವೆಂದು ಹೇಳುತ್ತಿರುತ್ತಾರೆ, ಇದರಿಂದಾಗಿ ಕೆಲವರು ಸತ್ತಿದ್ದಾರೆ. ಇದರ ಬಗ್ಗೆ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ.ಕ್ಯಾತ್ಸಂದ್ರ ಎನ್.ರಾಜಣ್ಣ : ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಉತ್ತರದಲ್ಲಿ ಇದನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ತುಮಕೂರು ಜಿಲ್ಲೆಯಲ್ಲಿಯೂ ಕೂಡ ಹೆಚ್ಚು ಮಲೇರಿಯಾ ಇರುತ್ತದೆಂದು ಪತ್ರಿಕೆಗಳಲ್ಲಿ ಡಿಸೆಂಬರ್ 12ನೇ ತಾರೀಖು ಬಂದಿದೆ. ನಾನೂ ಕೂಡ ಇದರ ಬಗ್ಗೆ ಸಂಬಂಧಪಟ್ಟ ಹಾಗೆ ಕರ್ನಾಟಕ ಸರ್ಕಾರಕ್ಕೆ ಪತ್ರವನ್ನೂ ಕೂಡ ಬರೆದಿದ್ದೇನೆ. ಅದರ ಬಗ್ಗೆ ನನಗೂ ಕೂಡ ಉತ್ತರವನ್ನು ಬರೆದಿದ್ದಾರೆ. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು, ಶಿರಾ ತಾಲ್ಲೂಕು ಎರಡು ತಾಲ್ಲೂಕುಗಳಲ್ಲಿ ರಿಪೋರ್ಟ್ ಆಗಿದೆ ಎಂದು ಇದೆ. ಉತ್ತರದಲ್ಲಿ ನೋಡಿದರೆ ಆ ಎರಡು ತಾಲ್ಲೂಕು ಹೆಸರಾಗಲಿ, ಜಿಲ್ಲೆಯ ಹೆಸರಾಗಲಿ ಇಲ್ಲವೇ ಇಲ್ಲ. ಆದ್ದರಿಂದ ಈ ಉತ್ತರ ಸಮರ್ಪಕವಾಗಿಲ್ಲ ಎನ್ನುವುದರ ಬಗ್ಗೆ ಬೇಕಾದರೆ ದಾಖಲೆಗಳು ಮುಖಾಂತರ ಹೇಳಬಲ್ಲೆ. ಅದನ್ನು ಮಾನ್ಯ ಸಚಿವರು ಸರಿಪಡಿಸಿಕೊಳ್ಳಬೇಕು. ತುಮಕೂರು ಜಿಲ್ಲೆಯಲ್ಲಿಯೂ ಕೂಡ ವರದಿಯಾಗಿರುತ್ತದೆ. ಗುಬ್ಬಿ ಹಾಗೂ ಶಿರಾ ತಾಲ್ಲೂಕು ನಮ್ಮ ಮಾನ್ಯ ಕಿರಣ್‌ಕುಮಾರ್‌ರವರ ಕ್ಷೇತ್ರದಲ್ಲಿ ಆಗಿರುತ್ತದೆ. ಅಲ್ಲಿ ವರದಿಯಾಗಿರುವ ಬಗ್ಗೆ ನಿಮ್ಮ ಉತ್ತರದಲ್ಲಿ ಸೇರಿರುವುದಿಲ್ಲ. ಅದರ ಬಗ್ಗೆ ಪತ್ರ ಕೂಡ ಸರ್ಕಾರದಿಂದ ಬಂದಿದೆ. ಅದನ್ನು ತಾವು ಸರಿಪಡಿಸಿ ಉತ್ತರದಲ್ಲಿ ಹೇಳಬೇಕು.

ಶ್ರೀ ಎನ್.ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ಕಳೆದವರ್ಷ ಒಂದು ಪ್ರಕರಣ ಸಾವಾಗಿದೆ. ಉತ್ತರದಲ್ಲಿ ನಾನು ಒದಗಿಸಿದ್ದೇನೆ, ಬಹುತೇಕ ದಾವಣಗೆರೆ, ಗದಗ, ಬೆಳಗಾಂ, ಮಂಡ್ಯ, ಕೊಪ್ಪಳ, ಹಾವೇರಿ ಉಡುಪಿ ಜಿಲ್ಲೆಗಳಲ್ಲಿ ಒಂದೊಂದು ಪ್ರಕರಣ ಕಳೆದ ವರ್ಷ ಸಾವಾಗಿದೆ. ಗುಲ್ಬರ್ಗಾ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎರಡೆರಡು ಪ್ರಕರಣಗಳು ದಾಖಲಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಾಗ 19 ಪರ್ಸೆಂಟ್ ಕಡಿಮೆಯಾಗಿದೆ. ಈಗಲೂ ಸಹ ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳಿದಹಾಗೆ ಅದರ ಬಗ್ಗೆ ನಾನು ಗಮನಹರಿಸಿ ಇನ್ನೂ ಹೆಚ್ಚಿನ ಕ್ರಮವನ್ನು ವಹಿಸುವ ಬಗ್ಗೆ ಮಲೇರಿಯಾ ರೋಗವನ್ನು ತಡೆಗಟ್ಟುವ ಬಗ್ಗೆ ಪ್ರಯತ್ನ ಮಾಡುತ್ತೇನೆ. ಜೊತೆಗೆ ಹೆಚ್ಚು ಪಂಚಾಯಿತಿಯ ಕೆಲಸಗಳು ಆಗಬೇಕಾಗುತ್ತದೆ, ಪಂಚಾಯಿತಿ ಮೂಲಕ ಮುಖ್ಯವಾಗಿ ರೋಗ ಹರಡುವಂತಹ ರೀತಿಯಲ್ಲಿ, ನೀರಾವರಿ ಇರತಕ್ಕಂತಹ ಕೃಷಿ ಇರತಕ್ಕಂತಹ ಪಂಚಾಯತಿಯ ಸ್ವಲ್ಪ ನೈರ್ಮಲ್ಯವನ್ನು ಗ್ರಾಮಗಳಲ್ಲಿ ಇಟ್ಟಾಗ ಮಾತ್ರ ಸಾಧ್ಯವಾಗುತ್ತದೆ. ಪಂಚಾಯಿತಿ ಇಲಾಖೆಗೂ

ಸಹ ಇದನ್ನು ಸಂಬಂಧಪಟ್ಟಂತಹ ಸಚಿವರ ಜೊತೆ ಮಾತನಾಡಿ ಇನ್ನು ಮುಂದಿನ ದಿನಗಳಲ್ಲಿ ಹೆಚ್ಚು ಕ್ರಮವನ್ನು ವಹಿಸಿಕೊಳ್ಳುತ್ತೇನೆ.

ಶ್ರೀ ಎನ್.ಯೋಗೀಶ್‌ಭಟ್: ಸನ್ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಆಯಿತು, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ತುಮಕೂರು ಜಿಲ್ಲೆಯಲ್ಲಿ ಮಲೇರಿಯಾ ರೋಗ ಇದೆ ಎಂಬುದರ ಬಗ್ಗೆ ನಿಮ್ಮ ಗಮನಕ್ಕೆ ಬಂದಿದೆಯಾ ಎಂದು ನಾನು ಕೇಳುತ್ತಿದ್ದೇನೆ. ನಿಮ್ಮ ಅಧಿಕಾರಿಗಳು ನಿಮ್ಮನ್ನು ಎಷ್ಟು ಕತ್ತಲಲ್ಲಿ ಇಡುತ್ತಾರೆ ಎಂಬುದಕ್ಕೆ ಹೇಳುತ್ತಿದ್ದೇನೆ. ಎಷ್ಟೆಷ್ಟು ಕೇಸ್‌ಗಳು ರಿಪೋರ್ಟ್ ಆಗಿದೆ ಎಂಬುದರ ಬಗ್ಗೆ ನಿಮ್ಮ ಇಲಾಖೆಯವರು ಕೊಟ್ಟಿರುವ ದಾಖಲೆಗಳು ಇದೆ. ಇದರ ಬಗ್ಗೆ ಮತ್ತೆ ಪತ್ರದ ಮುಖೇನ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ನೀವು ಹೇಳತಕ್ಕಂಥದ್ದು ಆ ಜಿಲ್ಲೆಯಲ್ಲಿ ಮಲೇರಿಯಾ ರೋಗ ಇದೆ ಎಂಬುದರ ಬಗ್ಗೆ ನಿಮ್ಮ ಉತ್ತರದಲ್ಲಿ ಕಾಣುತ್ತಿಲ್ಲ. ಅದಕ್ಕೋಸ್ಕರ ಇದು ನಿಮ್ಮ ಗಮನಕ್ಕೆ ಬಂದಿದೆಯಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್.ಚಲುವರಾಯಸ್ವಾಮಿ : ಇದರ ಬಗ್ಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಲೇರಿಯಾ ಕಾಯಿಲೆ ಇದ್ದರೆ ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತೇವೆಂದು ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕಳಕಪ್ಪ ಗುರುಶಾಂತಪ್ಪ ಬಂಡಿಯವರು ಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಯೋಗೀಶ್‌ಭಟ್‌ರವರೇ ತಾವು ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕಳಕಪ್ಪ ಗುರುಶಾಂತಪ್ಪ ಬಂಡಿಯವರೇ, ಪ್ರಶ್ನೆಯನ್ನು ಕೇಳಿ.

ಶ್ರೀ ಕಳಕಪ್ಪಾ ಗುರುಶಾಂತಪ್ಪ ಬಂಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು 1005ನೇ ಪ್ರಶ್ನೆಯನ್ನು ಸನ್ಮಾನ್ಯ ವಸತಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎನ್.ಯೋಗೀಶ್‌ಭಟ್ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ನಿಮಿಷ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಯೋಗೀಶ್‌ಭಟ್‌ರವರೇ, ನಿಮ್ಮಂತಹ ಹಿರಿಯ ಸದಸ್ಯರು ಈ ರೀತಿಯಾಗಿ ಮಾಡಿದರೆ ಹೇಗೆ? ಎಲ್ಲರೂ ಕೇಳುವಂತಹ ಪ್ರಶ್ನೆಗಳಿಗೆ ಉತ್ತರ ಸಿಗಬೇಕೋ ಬೇಡವೋ? ಎಲ್ಲಾ ಕಡೆಗಳಲ್ಲೂ ಮಲೇರಿಯಾ ರೋಗವಿದೆ.

ಶ್ರೀ ಎನ್.ಯೋಗೀಶ್‌ಭಟ್ : ಇಲ್ಲಾ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಾ ಇಲ್ಲಾ.

ಅಧ್ಯಕ್ಷರು : ನೋ ನೋ, ಎಲ್ಲಾ ಕಡೆಗಳಲ್ಲೂ ಮಲೇರಿಯಾ ಇದೆ.

ಶಾಸಕರ ಕೈ ತಪ್ಪಿದ ಅಧಿಕಾರ: ಪಂಚಾಯತ್ ಮೂಲಕ ಆಶ್ರಯ ಯೋಜನೆ ಅನುಷ್ಠಾನ.

104(1005) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?